ಖಾಸಗಿ ಪ್ರಸಾರಕ್ಕಾಗಿ ಮಾತ್ರ



# ವಾಣಿಜ್ಯ ಪ್ರಾಧ್ಯಾಪಕ ಪ್ರೊ. ಎಂ.ಯು. ಪ್ರಭಾಕರ್‌ಗೆ ಬೀಳ್ಕೊಡುಗೆ

**ಪುತ್ತೂರು:** ಇಲ್ಲಿನ ವಿವೇಕಾನಂದ ಕಾಲೇಜಿನ ವಾಣಿಜ್ಯ ವಿಭಾಗದ ಡೀನ್ ಪ್ರೊ.ಎಂ.ಯು.ಪ್ರಭಾಕರ್ ಕಳೆದ ಮೇ 31 ರಂದು ಸೇವೆಯಿಂದ ನಿವೃತ್ತರಾದರು. ಈ ಹಿನ್ನಲೆಯಲ್ಲಿ ಕಾಲೇಜಿನ ಆಡಳಿತ ಮಂಡಳಿ, ಶಿಕ್ಷಕ ಹಾಗೂ ಶಿಕ್ಷಕೇತರ ವೃಂದದವರಿಂದ ಬೀಳ್ಕೊಡುಗೆ ಸಮಾರಂಭ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರೊ.ಪ್ರಭಾಕರ್ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತಯಾರು ಮಾಡುವುದಷ್ಟೇ ಅಧ್ಯಾಪಕನ ಕರ್ತವ್ಯವಲ್ಲ, ಬದಲಾಗಿ ವಿದ್ಯಾರ್ಥಿಯೊಬ್ಬನ ಬದುಕಿಗೂ ಮಾರ್ಗದರ್ಶಕನಾಗಿರಬೇಕು. ಕಾಲೇಜಿನಲ್ಲಿ ಯುವವಿದ್ಯಾರ್ಥಿಗಳೊಂದಿಗೆ ಕರ್ತವ್ಯ ನಿರ್ವಹಿಸುತ್ತಾ ಅದೇ ವಯಸ್ಸಿನ ಮನ ಕಾರಣರಾದರು. ಈ ಕಾಲೇಜಿಗೆ ತಾನು ಸೇರದೆ ಇದ್ದಿದ್ದಲ್ಲಿ ಜೀವನದ ಅನೇಕ ಅವಕಾಶಗಳು ಕೈತಪ್ಪಿ ಹೋಗುತ್ತಿತ್ತು. ಈ ಹಿನ್ನಲೆಯಲ್ಲಿ





ಪ್ರೊ. ಎಂ.ಯು. ಪ್ರಭಾಕರ್ ಮಾತನಾಡುತ್ತಿರುವುದು

ಈ ಕಾಲೇಜಿನಲ್ಲಿ ಕಳೆದ ದಿನಗಳ ಬಗೆಗೆ ತೃಪ್ತಿ ಇದೆ ಎಂದು ನುಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಚ್.ಮಾಧವ ಭಟ್ ಮಾತನಾಡಿ ಪ್ರೊ.ಎಂ.ಯು..ಪ್ರಭಾಕರ್ ಒಬ್ಬ ಕ್ರೀಡಾಪಟುವಾಗಿಯೂ ಉತ್ತಮ ಸಾಧನೆ ಮಾಡಿದವರು. ಹಿಂದೆ ವಿವೇಕಾನಂದ ಕಾಲೇಜಿನ ಅಧ್ಯಾಪಕರ ಕ್ರಿಕೆಟ್ ತಂಡ ಉಡುಪಿಯಲ್ಲಿ ಆಡುವುದಕ್ಕೆ ತೆರಳುತ್ತಿದ್ದಾಗ ಇವರ ಬ್ಯಾಟಿಂಗ್ ನೋಡುವುದಕ್ಕೆಂದೇ ತುಂಬ ಜನ ಕ್ರೀಡಾಂಗಣಕ್ಕೆ ಬರುತ್ತಿದ್ದರು ಎಂದು ನೆನಪಿಸಿಕೊಂಡರಲ್ಲದೆ ಕ್ರಿಕೆಟ್ ಮಾತ್ರವಲ್ಲದೆ, ಶಟ್ಲ್ ಬ್ಯಾಡ್ಮಿಂಟನ್, ಟೇಬಲ್ ಟೆನಿಸ್, ಚೆಸ್ ಮೊದಲಾದ ವಿಭಾಗಗಳಲ್ಲೂ ಪ್ರಭಾಕರ್ ಅವರ ಸಾಧನೆ ಗಮನಾರ್ಹ ಎಂದು ಹೇಳಿದರು.

**1953 ಮೇ 10ರಂದು ಜನಿಸಿದ ಪ್ರಭಾಕರ್‌ರವರ ತಂದೆ ಉಪೇಂದ್ರ ಆಚಾರ್ಯ. ಮೂಡಬಿದಿರೆ ಹಾಗೂ ಮುಲ್ಕಿಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. 13–7–1976ರಿಂದ 31–5–2013ರ ವರೆಗೆ ನಮ್ಮ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಇವರಿಗೆ ಕಾಲೇಜು ಹಲವಾರು ಸವಿ ನೆನಪನ್ನು ಕಟ್ಟಿ ಕೊಟ್ಟಿದೆಯೆಂದು ಭಾವಿಸುತ್ತೇವೆ. ಇವರ ಪತ್ನಿ ಜಯಶ್ರೀ ಹಾಗೂ ಪುತ್ರ ತೇಜಸ್.**

ಉಪಸ್ಥಿತರಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಹಣಾಧಿಕಾರಿ ಪ್ರೊ.ಎ.ವಿ.ನಾರಾಯಣ ತಾವು ಕಾಲೇಜಿನ ವಾಣಿಜ್ಯ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂದರ್ಭದಲ್ಲಿ ಪ್ರಭಾಕರ್ ಅವರೊಂದಿಗಿನ ಒಡನಾಟವನ್ನು ಸ್ಮರಿಸಿಕೊಂಡರು. ಪ್ರಭಾಕರ್ ವಾಣಿಜ್ಯ ವಿಷಯದಲ್ಲಿ ಮಾತ್ರವಲ್ಲದೆ ಆಂಗ್ಲ ಭಾಷೆಯ ಮೇಲೂ ಸಾಕಷ್ಟು ಪ್ರಭುತ್ವ ಸಾಧಿಸಿದವರು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಪಿ.ಶ್ರೀನಿವಾಸ ಪೈ ಮಾತನಾಡಿ

**"ಎಂ. ಯು ಪ್ರಭಾಕರ ಕೇವಲ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ತನ್ನ ಸಹ ಉಪನ್ಯಾಸಕ ವೃಂದಕ್ಕೂ ಸದಾ ಉತ್ತಮ್ಮ ಸಲಹೆಗಾರರಾಗಿದ್ದರು. ಶಿಸ್ತಿನಲ್ಲಿ ಎತ್ತಿದ ಕೈ."**

**❍ ವಿಜಯ ಸರಸ್ವತಿ**
**ವಾಣಿಜ್ಯ ಉಪನ್ಯಾಸಕಿ**

ಪ್ರಭಾಕರ್ ಮುಕ್ತ ಮನಸ್ಸಿನ ವ್ಯಕ್ತಿ. ಅವರೆಂದೂ ಮತ್ತೊಬ್ಬರನ್ನು ನೋಯಿಸಿದವರಲ್ಲ. ಅವರ ನಿವೃತ್ತಿ ಸಹಜವಾಗಿಯೇ ಕಾಲೇಜಿಗೆ ದೊಡ್ಡ ನಷ್ಟವಾಗಿ ಕಾಡಲಿದೆ. ಆದರೆ ನಿವೃತ್ತಿಯ ನಂತರವೂ ಅವರು ತಮ್ಮ ಜ್ಞಾನವನ್ನು ವಿದ್ಯಾಥಿಗಳಿಗೆ ಪಸರಿಸುವ ಕಾರ್ಯ ಮಾಡಬೇಕು ಎಂದು ನುಡಿದರು. ನಿವೃತ್ತರ ಬಗೆಗೆ ಡಾ.ಪಿ.ಕೆ.ಬಾಲಕೃಷ್ಣ, ಪ್ರೊ.ವಿ.ಜಿ.ಭಟ್, ವಿಜಯ ಸರಸ್ವತಿ, ಅಧ್ಯಾಪಕೇತರ ಸಂಘದ ಅಧ್ಯಕ್ಷ ಎ.ಜಗನ್ನಾಥ್ ಅನಿಸಿಕೆ ಹಂಚಿಕೊಂಡರು.

ಹಿಂದಿ ವಿಭಾಗದ ಮುಖ್ಯಸ್ಥೆ ದುರ್ಗಾರತ್ನ ಸಿ ಪ್ರಾರ್ಥಿಸಿದರು. ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಪಿ.ಕೆ.ಬಾಲಕೃಷ್ಣ ಸ್ವಾಗತಿಸಿದರು. ಕಂಪ್ಯೂಟರ್ ಸೈನ್ಸ್ ಉಪನ್ಯಾಸಕಿ ಹರಿಣಿ ವಂದಿಸಿದರು. ಗಣಿತ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ.ಶಂಕರನಾರಾಯಣ ಭಟ್ ಕಾರ್ಯಕ್ರಮ ನಿರ್ವಹಿಸಿದರು.

# ತುಳುನಾಡಿನ ಜನರು ಸಹೃದಯರು: ದಾಸಪ್ಪ ರೈ

**ಪುತ್ತೂರು:** ತುಳುವ ಎಂಬ ಪದದಲ್ಲಿ ಹಲವಾರು ಅರ್ಥಗಳು ಅಡಗಿವೆ. ಕಠಿಣ ಮಾತುಗಳನ್ನೂ ಕೇಳಿ ಮೌನವಾಗಿ ಸಹಿಸಿಕೊಳ್ಳುವ ಮೃದು ಹೃದಯರು ತುಳುನಾಡಿನ ಜನರು. ಈ ಭಾಷೆಯನ್ನು ಮಾತನಾಡುವ ಜನರ ಸಂಖ್ಯೆ ಇಳಿಮುಖವಾಗುತ್ತಿದೆ. ಎಂಬುದಾಗಿ ಹಿರಿಯ ಯಕ್ಷಗಾನ ಕಲಾವಿದ ದಾಸಪ್ಪ ರೈ ಹೇಳಿದರು.





ದಾಸಪ್ಪ ರೈ ಮಾತನಾಡುತ್ತಿರುವುದು

ಅವರು ವಿವೇಕಾನಂದ ಕಾಲೇಜಿನ 2013–14 ನೇ ಸಾಲಿನ ತುಳು ಸಂಘವನ್ನು 'ಸಿಂಗಾರ' ಹಸ್ತಪತ್ರಿಕೆ ಬಿಡುಗಡೆಗೊಳಿಸುವ ಮೂಲಕ ಉದ್ಘಾಟಿಸಿದರು. ಅವರು ಇತರ ಭಾಷೆಗಳನ್ನು ಕಲಿಯಬೇಕು ಆದರೆ ಎಂದಿಗೂ ತುಳುವನ್ನು ಮರೆಯಬಾರದು. ಇದು ನಮ್ಮ ತಾಯಿ. ತುಳು ಅವಿದ್ಯಾವಂತರ ಭಾಷೆ ಎಂಬ ಭಾವನೆಯನ್ನು ತೊರೆಯಬೇಕು ಎಂದರು.

ಹಿಂದಿನ ಕಾಲದಲ್ಲಿ ತುಳು ನಾಡು ವಿಸ್ತಾರವಾಗಿ ಹಬ್ಬಿತ್ತು. ಭೇದ ಭಾವಗಳಿಲ್ಲದೆ ಎಲ್ಲರೂ ಒಂದೇ ಎಂಬ ಭಾವನೆ ತುಳು ಜನರಲ್ಲಿ ಹುಟ್ಟಿನಿಂದ ಬೆಳೆದು ಬರುವುದು ಸಾಮಾನ್ಯ. ಇತ್ತೀಚಿನ ದಿನಗಳಲ್ಲಿ ತುಳು ಭಾಷೆಯು ಪಾಶಾತೀಕರಣದಿಂದಾಗಿ ಅಳಿವಿನಂಚಿಗೆ ಸಾಗುತ್ತಿದೆ. ಮಾಧ್ಯಮಗಳ ಮೂಲಕವೂ ತುಳುವನ್ನು ಅಳಿವಿನಂಚಿನಿಂದ ಉಳಿಸುವ ಕಡೆ ತುಳುವ ಸಮಾಜ ಚಿಂತಿಸಬೇಕಾಗಿದೆ ಎಂದು ನುಡಿದರು.

ತುಳು ಭಾಷೆಯನ್ನು ಮರೆತರೆ ತಾಯಿ–ತಂದೆಗೆ ದ್ರೋಹ ಮಾಡಿದಂತಾಗುವುದು. ಪಂಚ ದ್ರಾವಿಡ ಭಾಷೆಗಳಲ್ಲಿ ತುಳು ಸೇರ್ಪಡೆಯಾಗಿದೆ ಆದರೂ ಇನ್ನೂ ರಾಷ್ಟ್ರೀಯ ಮನ್ನಣೆ ದೊರೆಯದಿರುವುದು ವಿಷಾದಕರ. ತುಳುನಾಡಿನ ಹೆಮ್ಮೆಯನ್ನು ಉಳಿಸುವ ಹೊಣೆ ಯುವಕರ ಕೈಯಲ್ಲಿದೆ ಎಂದು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಭಾಷೆಯ ರೀತಿ, ರಿವಾಜುಗಳನ್ನು ಮರೆತುಬಿಡಬಾರದು ನಾವು ಜನಿಸಿದ ಮಣ್ಣಿಗೆ ಸೇವೆ ಸಲ್ಲಿಸುವತ್ತ ಸಾಗಬೇಕು ಎಂದು ಕಿವಿಮಾತುಗಳನಾಡಿದರು.

ತುಳುಸಂಘದ ಸಂಯೋಜಕರು, ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ನರಸಿಂಹ ಭಟ್ ಅಧ್ಯಕ್ಷೀಯ ಭಾಷಣದಲ್ಲಿ ಮಾತನಾಡಿ, ತುಳುನಾಡಿಗೆ ಹಲವಾರು ರಾಜಕಾರಣಿಗಳು ದೇವಾಲಯದ ಭೇಟಿಗೆಂದು ಬರುತ್ತಾರೆ. ಆದರೆ ಅವರು ಸಂವಿಧಾನದಲ್ಲಿ ಈ ಭಾಷೆಗೆ ಮನ್ನಣೆ ದೊರಕಿಸಿ ಕೊಡುವತ್ತ ಸಹಕರಿಸುತ್ತಿಲ್ಲ. ಯುವಶಕ್ತಿಯು ತುಳುವನ್ನು ಪ್ರಚಾರ ಮಾಡುವ ಮೂಲಕ ಬೆಳೆಸಬೇಕಾಗಿದೆ. ಈ ವರ್ಷದ ಕಾಲೇಜಿನ ತುಳು ಸಂಘ ಉತ್ತಮ ಕಾರ್ಯಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಡೆಯಲಿ ಎಂದು ಶುಭ ಹಾರೈಸಿದರು.

ತುಳು ಸಂಘದ ಸಂಯೋಜಕ ಹಾಗೂ ಸಂಸ್ಕೃತ ಉಪನ್ಯಾಸಕ ಡಾ. ಶ್ರೀಶ ಕುಮಾರ್ ಎಂ.ಕೆ. ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಂಸ್ಕೃತ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ರಕ್ಷಾ ಧನ್ಯವಾದ ಮಾಡಿದರು. ಪೂಜಾ ಶೆಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

# 'ಸಂಸ್ಕೃತ ಬೆಳವಣಿಗೆಗೆ ಕಟಿಬದ್ಧರಾಗಬೇಕು'

**ಪುತ್ತೂರು:** ಸಂಸ್ಕೃತ ಭಾಷೆ ಅಮೃತ ಭಾಷೆ. ಅದು ದೇವ ಭಾಷೆ. ಪುರಾತನ ಗ್ರಂಥಗಳೆಲ್ಲ ಸಂಸ್ಕೃತದಲ್ಲಿವೆ. ಇಂದು ಸಂಸ್ಕೃತಕ್ಕೆ ವಿದೇಶಗಳಲ್ಲಿರುವಷ್ಟು ಪ್ರೋತ್ಸಾಹ ನಮ್ಮ ದೇಶದಲ್ಲಿ ಸಿಗುತ್ತಿಲ್ಲ. ಇದು ಸಂಸ್ಕೃತವನ್ನು ವಿನಾಶದೆಡೆಗೆ ತಳ್ಳುತ್ತಿದೆ. ಸಂಸ್ಕೃತ ಸಂಘಗಳ ರಚನೆಯ ಮೂಲಕ ಅದನ್ನು ರಕ್ಷಿಸುವ ಪ್ರಯತ್ನ ನಿರಂತರವಾಗಿ ಸಾಗಬೇಕು. ವಿದ್ಯಾರ್ಥಿಗಳು ಹೆಚ್ಚು, ಹೆಚ್ಚು ಸಂಸ್ಕೃತ ಅಧ್ಯಾಯನಕ್ಕೆ ಒಲವು ತೋರಿಸಬೇಕು, ಆಗ ಮಾತ್ರ ಸಂಸ್ಕೃತ ಬೆಳೆಯಲು ಸಾಧ್ಯ ಎಂದು ನಿವೃತ್ತ ಟೆಲಿಕಾಂ ಇಂಜಿನಿಯರ್ ರಂಗನಾಥ್ ರಾವ್ ಬೊಳುವಾರು ಹೇಳಿದರು.

ಅವರು ಇಲ್ಲಿನ ವಿವೇಕಾನಂದ ಕಾಲೇಜಿನ 'ವಿಕಾಸಂ' ಸಂಸ್ಕೃತ ಸಂಘ ಮತ್ತು 'ಸುರ ಸರಸ್ವತಿ' ಶೃಂಗೇರಿ ಇದರ ಆಶ್ರಯದಲ್ಲಿ ನಡೆದ ಸರಳ ಸಂಸ್ಕೃತ ಪರೀಕ್ಷೆಗಳ ಉಚಿತ ತರಗತಿಗಳನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಸಂಸ್ಕೃತ ಭಾಷೆಯ ಬೆಳವಣಿಗೆಗಾಗಿ ಕಟಿಬದ್ಧರಾಬೇಕು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಚ್.





ರಂಗನಾಥ್ ರಾವ್ ಮಾತನಾಡುತ್ತಿರುವುದು

ಮಾಧವ ಭಟ್ ಮಾತನಾಡಿ ಹಿರಿಯರು ಸಂಸ್ಕೃತವನ್ನು ಕಿರಿಯರಿಗೆ ರವಾನಿಸದೇ ಇರುವುದು ಸಂಸ್ಕೃತದ ನಾಶಕ್ಕೆ ಕಾರಣ. ಸಂಸ್ಕೃತದಂತಹ ವೈಜ್ಞಾನಿಕ ಭಾಷೆ ಇನ್ನೊಂದಿಲ್ಲ.

ಇದೇ ಸಂದರ್ಭದಲ್ಲಿ ಸರಸ್ವತಿ ಶ್ಲೋಕವನ್ನು ವಿದ್ಯಾರ್ಥಿಗಳು ಪಠಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಕೃತ ವಿಭಾಗ ಮುಖ್ಯಸ್ಥೆ ಉಮಾದೇವಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಪೌಷ ಭಟ್ ಪ್ರಾರ್ಥಿಸಿದರು. ಸಂಸ್ಕೃತ ಉಪನ್ಯಾಸಕ, ಪರೀಕ್ಷಾ ಸಂಯೋಜಕ ಡಾ.ಶ್ರೀಶ ಕುಮಾರ್ ಯಂ.ಕೆ ಸ್ವಾಗತಿಸಿ, ವಿಕಾಸಂನ ಅಧ್ಯಕ್ಷ ಸುದರ್ಶನ್ ಶರ್ಮ ವಂದಿಸಿದರು.

# ಕಾರ್ಗಿಲ್ ಸ್ಮರಣೆ



**ಪುತ್ತೂರು:** ನಮ್ಮ ದೇಶದ ಮಾನ ಉಳಿಸಲು ಹೋರಾಡಿದ ಯೋಧರ ನೆನಪಿನ 14ರ ವಿಜಯೋತ್ಸವ ಸಂದರ್ಭದಲ್ಲಿ ದೇಶದ ಆಗು ಹೋಗುಗಳ ಬಗ್ಗೆ ಕ್ಷಣ ಕಾಲ ಚಿಂತಿಸಬೇಕಿದೆ. ಯುದ್ಧದ ವರ್ಣನೆ ಸುಂದರ ಆದರೆ ಅದರ ವಾಸ್ತವತೆ ಕಠಿಣ ಎಂದು ಸಂಸ್ಕೃತ ವಿಭಾಗದ ಉಪನ್ಯಾಸಕ ಡಾ.ಶ್ರೀಶಕುಮಾರ್ ಹೇಳಿದರು. ಅವರು ಇಲ್ಲಿನ ವಿವೇಕಾನಂದ ಕಾಲೇಜು ವಿದ್ಯಾರ್ಥಿ ಸಂಘ ಆಯೋಜಿಸಿದ್ದ ಕಾರ್ಗಿಲ್ ವಿಜಯಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಗೌರವಿಸಲ್ಪಟ್ಟ ವಾಯುದಳದ ಎಕ್ಸ್ ಸಾರ್ಜೆಂಟ್ ರಮನಾಥ ರೈ ಮಾತನಾಡಿ ಯೊಧರ ಸಾವು ಹೃದಯ ಮಿಡಿಯುವಂತದ್ದು. ಆದರೂ ಆ ಸಾವಿನಲ್ಲಿ ಹೆಮ್ಮೆ ಇರುತ್ತದೆ. ಯೊಧರಿಗಿ ಸರಕಾರ ನೀಡಿದ ಸೌಲಭ್ಯದ ಕೊರತೆ ಕಡಿಮೆಯಾಗಿದ್ದೇ ಅಧಿಕ ಸಂಖ್ಯೆಯ ಸಾವಿಗೆ ಕಾರಣ ಎಂದು ನುಡಿದರು.

# ವಿವೇಕಾನಂದದಲ್ಲಿ ಐಟಿ ಕ್ಲಬ್ ಉದ್ಘಾಟನೆ

**ಪುತ್ತೂರು:** ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಆದರ್ಶ ವ್ಯಕ್ತಿಗಳ ಮಾದರಿಗಳನ್ನು ಇಟ್ಟುಕೊಂಡಿರಬೇಕು. ಆಗ ಮಾತ್ರ ಭವಿಷ್ಯದಲ್ಲಿ ಗೆಲುವು ಸಾಧಿಸಲು ಸಾಧ್ಯ. ವಿದ್ಯಾರ್ಥಿಗಳಲ್ಲಿ ಹೊಸ ಹೊಸ ಆಲೋಚನೆಗಳಿರಬೇಕು. ಆ ಯೋಚನೆಗಳು ಹೊಸ ವಿಚಾರಗಳ ಸೃಷ್ಟಿಗೆ ಪ್ರೇರಣೆಯಾಗಬೇಕು ಅದು ಶಿಕ್ಷಣ ರಂಗದಲ್ಲಿ ಮಾತ್ರವಲ್ಲದೇ ಜೀವನದಲ್ಲೂ ಬೇಕು ಎಂದು ಮಂಗಳೂರಿನ ಸೈಂಟ್ ಜೋಸೆಫ್ ಎಂಜಿನಿಯರ್ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಮತ್ತು ಎಂಸಿಎ ವಿಭಾಗದ ಮುಖ್ಯಸ್ಥೆ ಅನುಶ್ರೀ ರಾಜ್ ಹೇಳಿದರು.





ಅವರು ಇತ್ತೀಚೆಗೆ ಇಲ್ಲಿನ ವಿವೇಕಾನಂದ ಕಾಲೇಜಿನಲ್ಲಿ ನಡೆದ ಐಟಿ ಕ್ಲಬ್‌ನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಅವನದೇ ಆದ ಪ್ರತಿಭೆ ಇದ್ದೇ ಇರುತ್ತದೆ. ಎಲ್ಲರೂ ಸಮರ್ಥರೇ. ಯಾರೂ ದುರ್ಬಲರಲ್ಲ. ವಿವೇಕಾನಂದರ ವಾಣಿಯಂತೇ ತಾವು ದುರ್ಬಲರೆಂಬ ಭಾವನೆಯನ್ನು ಇಟ್ಟುಕೊಳ್ಳುವುದು ಮಹಾ ಪಾಪ. ಆ ಸಾಮರ್ಥ್ಯವನ್ನು ಬಳಸಿಕೊಂಡು ಐಟಿ ಕ್ಷೇತ್ರಗಳಲ್ಲಿ ಹೊಸ ಬದಲಾವಣೆಯನ್ನು ತರುವ ಮೂಲಕ ತಮ್ಮ ಕೊಡುಗೆಯನ್ನು ಕೊಡಬೇಕು ಎಂದು ತಿಳಿ ಹೇಳಿದರು.

ವಿದ್ಯಾರ್ಥಿಗಳು ಬದಲಾಗುತ್ತಿರುವ ಆಧುನಿಕ ಜಗತ್ತಿಗೆ ತಮ್ಮನ್ನು ತಾವು ತೆರೆದಿಟ್ಟುಕೊಳ್ಳಬೇಕು. ಆಗ ಮಾತ್ರ ಐಟಿ ಕ್ಷೇತ್ರದಲ್ಲಿ ಸಾಧಿಸಲು ಸಾಧ್ಯ. ವಿದ್ಯಾರ್ಥಿಗಳು ಐಟಿ ಕ್ಷೇತ್ರದಲ್ಲಿ ಸಣ್ಣ ಸಣ್ಣ ಆವಿಷ್ಕಾರವನ್ನು ತಂದರೆ, ಅದು ಮುಂದೆ ಕ್ರಾಂತಿಕಾರಿ ಬದಲಾವಣೆಗೆ ಕಾರಣವಾಗಬಹುದು ಎಂದು ಅವರು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಾ. ಎಚ್ ಮಾಧವ್ ಭಟ್ ಮಾತನಾಡಿ, ಐ.ಟಿ ಪರಿಣತರು ಸಂಪ್ರಾದಾಯಿಕ ಮೌಲ್ಯಗಳನ್ನು ಉಳಿಸಿಕೊಂಡು ಹೋಗುವ ಜೊತೆಗೆ ಉತ್ತಮ ಸಾಮಾಜಿಕ ಸಂಬಂಧಗಳನ್ನು ಬೆಳೆಸಿಕೊಂಡು ಹೋಗಬೇಕಾಗಿದೆ. ಐಟಿ ವಿದ್ಯಾರ್ಥಿಗಳು ಮುಂದೆ ತಮ್ಮ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಬೇಕಾದರೆ, ಸಾಮಾಜಿಕ ಬಾಂಧವ್ಯ ಮುಖ್ಯವಾಗಿರುತ್ತದೆ ಎಂದು ಅವರು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಸೈನ್ಸ್ ಉಪನ್ಯಾಸಕಿ ಹಾಗೂ ಐಟಿ ಕ್ಲಬ್‌ನ ಸಂಯೋಜಕಿ ರಮ್ಯಾ ಕಶ್ಯಪ್. ಯು ಸ್ವಾಗತಿಸಿದರು. ರಮ್ಯಾ ಬಿ. ಎಸ್ ಮತ್ತು ತಂಡದವರು ಪ್ರಾರ್ಥಿಸಿದರು. ಐಟಿ ಕ್ಲಬ್‌ನ ಅಧ್ಯಕ್ಷ ಸನತ್ ಕುಮಾರ್ ವಂದಿಸಿದರು. ಶಮತ್ ಮತ್ತು ಭರತ್ ಕಾರ್ಯಕ್ರಮವನ್ನು ನಿರೂಪಿಸಿದರು.

# ಸಹಾಯ ಕಲರವ





**ಪುತ್ತೂರು:** ವಿವೇಕಾನಂದ ಕಾಲೇಜಿನ ಲಲಿತಕಲಾ ಸಂಘದ ಸಹಯೋಗದಲ್ಲಿ ಸಹಾಯ ಟಿ.ವಿ ಇತ್ತೀಚೆಗೆ ಕಾಲೇಜಿನಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿತು. ತಮಾಷೆಗಾಗಿ ಫನ್ನಿಗೇಮ್ಸ್ ಕಾರ್ಯಕ್ರಮವನ್ನು ಸಹಾಯ ಟಿ.ವಿಯ ವಿ.ಜೆಯಾಗಿರುವ ಅಖಿಲ್ ನೆರವೇರಿಸಿಕೊಟ್ಟರು, ಇವರೊಂದಿಗೆ ಕ್ಯಾಮರಾಮ್ಯಾನ್ ಎಡ್ವರ್ಡ್ ಕಾರ್ಯಕ್ರಮಗಳನ್ನು ಸೆರೆ ಹಿಡಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಲಲಿತಕಲಾ ಸಂಘದ ಕಾರ್ಯಕ್ರಮ ನಿರ್ವಾಹಕ ಹಾಗೂ ಇಂಗ್ಲಿಷ್ ಉಪನ್ಯಾಸಕ ಎಚ್.ಬಾಲಕೃಷ್ಣ, ವ್ಯವಹಾರ ನಿರ್ವಹಣೆ ವಿಭಾಗದ ಉಪನ್ಯಾಸಕಿ ವಿಜಯ ಸರಸ್ವತಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ರಾಕೇಶ್ ಕುಮಾರ್ ಕಮ್ಮಾಜೆ ಉಪಸ್ಥಿತರಿದ್ದರು.